**ಪ್ರಮಾಣೀಕರಿಸಲಾದ ದಿನಾಂಕ: 02.07.2025.**

**<u>ಪಾಟೀ ಸವಾಲು : ಆರೋಪಿ ಪರ ಶ್ರೀ. V.C ವಕೀಲರಿಂದ</u> :-**

ನಾನು ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈಗ ವ್ಯವಸಾಯ ಮಾಡುತ್ತಿದ್ದೇನೆ. ಈ ಪ್ರಕರಣವನ್ನು ದಾಖಲು ಮಾಡಿದ ನಂತರ ದಿನಾಂಕಃ 09.09.2017 ರಂದು ಜಂಟಿ ಮೆಮೋವನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಈ ಸದರಿ ಮೆಮೋವನ್ನು ಸಲ್ಲಿಸುವ ಕಾರಣಕ್ಕೆ ಆರೋಪಿತನು ನನಗೆ ರೂ.2,50,000/- ಹಣವನ್ನು ಮರು ಪಾವತಿ ಮಾಡಿದ್ದು, ಇನ್ನು ಉಳಿದ ರೂ.2,00,000/- ಕ್ಕೆ ಕಾಲಾವಕಾಶ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಅದಾದ ನಂತರ ಆರೋಪಿತನು ಮತ್ತೆ ರೂ.1,20,000/- ನನಗೆ ಮರು ಪಾವತಿ ಮಾಡಿರುತ್ತಾನೆ ಎಂದರೆ ಸರಿ. ಇನ್ನು ಉಳಿದ ರೂ.80,000/- ಹಣವನ್ನು ಆರೋಪಿತನು ಮರು ಪಾವತಿ ಮಾಡಿದ್ದಲ್ಲಿ ಸದರಿ ಮೆಮೋದ ಪ್ರಕಾರ ನಾನು ಎಲ್ಲಾ ದಾಖಲಾತಿಗಳನ್ನು ಆರೋಪಿತನಿಗೆ ಹಿಂತಿರುಗಿಸಬೇಕಾಗಿತ್ತು ಎಂದರೆ ಸಾಕ್ಷಿ ಹೌದು ಆದರೆ ಸದರಿ ಮೆಮೋದ ಪ್ರಕಾರ ಆರೋಪಿತನು ನನಗೆ 5 ತಿಂಗಳವರೆಗೆ ಹಣವನ್ನು ಕೊಡಬೇಕಾಗಿತ್ತು, ಆದರೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮೆಮೋದ ಪ್ರಕಾರ ನಾನು ಆರೋಪಿತನ 4 ಚೆಕ್ಕು ಹಾಗೂ 1 ಮಳಿಗೆಯ ಟೈಟಲ್ ಡೀಡ್ ನ್ನು ಕೊಡಬೇಕಾಗುತ್ತದೆ ಎಂದರೆ ಸಾಕ್ಷಿಯು ಆರೋಪಿತನು ನನಗೆ ರೂ.40,000/- ಹಣ ಕೊಟ್ಟಾಗ ನಾನು ಸದರಿ ಟೈಟಲ್ ಡೀಡ್ ನ್ನು ಹಿಂದಿರುಗಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಡೀಡ್ ನ್ನು ನಾನು ಆರೋಪಿತನ ಕೈಗೆ ಕೊಟ್ಟಿರುತ್ತೇನೆ. ನಾನು ಆರೋಪಿತನಿಗೆ ಯಾವುದೇ ಡೀಡ್ ನ್ನು ಹಿಂದಿರುಗಿಸಿರುವುದಿಲ್ಲ ಹಾಗೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇನ್ನುಳಿದ 4 ಚೆಕ್ಕುಗಳು ನಿಮ್ಮ ಬಳಿ ಇವೆ ಎಂದರೆ ಸಾಕ್ಷಿಯು ನನ್ನ ಬಳಿ ಇಲ್ಲ, 3 ಚೆಕ್ಕು ಇದ್ದು ಇನ್ನೊಂದು ಚೆಕ್ಕನ್ನು ಈ ಪ್ರಕರಣದಲ್ಲಿ ದಾಖಲಿಸಿರುತ್ತೇನೆ ಎನ್ನುತ್ತಾರೆ. ಈ ಪ್ರಕರಣದ ಚೆಕ್ಕನ್ನು ಹೊರತುಪಡಿಸಿ ಆರೋಪಿತನ ಇನ್ನುಳಿದ 4 ಚೆಕ್ಕು ನನ್ನ ಬಳಿ ಇವೆ ಎಂದರೆ ಸರಿಯಲ್ಲ. ದಿನಾಂಕಃ 30.05.2024 ರಂದು ಆರೋಪಿತನು ಈ ನ್ಯಾಯಾಲಯದ ಮುಂದೆ ನನ್ನ ಬಳಿ ಇರುವ ಚೆಕ್ಕುಗಳು ಹಾಗೂ ಡೀಡ್ ನ್ನು ಹಾಜರುಪಡಿಸುವಂತೆ ಅರ್ಜಿ ಸಲ್ಲಿಸಿದ್ದನು ಎಂದರೆ ಸರಿ. ಸದರಿ ಅರ್ಜಿಗೆ ನನ್ನ ಲಿಖಿತ ಉತ್ತರವನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಲಿಖಿತ ಉತ್ತರದಲ್ಲಿ ಡೀಡ್ ನ್ನು ಆರೋಪಿತನಿಗೆ ಹಿಂದಿರುಸಿರುತ್ತೇನೆ ಎಂದು ಹೇಳಿ ನಮೂದು ಮಾಡಲು ಯಾವುದಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನಗೆ ಅದು

ಗೊತ್ತಾಗಲಿಲ್ಲ ಎಂದು ನುಡಿಯುತ್ತಾರೆ. ಸದರಿ ಡೀಡ್ ನ್ನು ನಾನು ಆರೋಪಿತನಿಗೆ ಕೊಟ್ಟಿಲ್ಲದಿದ್ದ ಕಾರಣ ನಾನು ಅದನ್ನು ನನ್ನ ಲಿಖಿತ ಉತ್ತರದಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಲಿಖಿತ ಉತ್ತರದ 3ನೇ ಪ್ಯಾರಾದಲ್ಲಿ ನಾನು ಡೀಡ್ ನ್ನು ಎಸ್.ಎಸ್.ಶೇಖರ್ ರವರಿಗೆ ಕೊಟ್ಟಿರುತ್ತೇನೆ ಎಂದು ನಮೂದು ಮಾಡಿರುತ್ತೇನೆ ಎಂದರೆ ಸಾಕ್ಷಿಯು ಅವರು ಕೂಡ ಆ ದಿನ ಅಲ್ಲಿದ್ದು ಅವರಿಗೆ ಕೂಡ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸದರಿ ದಾಖಲಾತಿಯನ್ನು ಆರೋಪಿತರ ಗಮನಕ್ಕೆ ತರದೇ ಶೇಖರ್ ರವರಿಗೆ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ನಾನು ಕೊಡುವ ಕಾಲಕ್ಕೆ ಆರೋಪಿತನು ಅಲ್ಲಿಯೇ ಇದ್ದನು ಎಂದು ನುಡಿಯುತ್ತಾರೆ. ನಾನು ದಾಖಲಾತಿ ಕೊಡುವ ಕಾಲಕ್ಕೆ ಆರೋಪಿತನು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಶೇಖರ್ ರವರಿಗೆ ಕೇವಲ sale deed & ಒಂದು agreement ನ್ನು ಕೊಟ್ಟಿರುತ್ತೇನೆ. ಸದರಿ ಅಗ್ರೀಮೆಂಟ್ ಹಣದ ವ್ಯವಹಾರಕ್ಕೆ ಸಂಬಂಧಿಸಿದ್ದು ಇರುತ್ತದೆ. ಸದರಿ ಅಗ್ರೀಮೆಂಟಿನಲ್ಲಿ ನಮೂದು ಮಾಡಿರುವ ಹಣದ ವ್ಯವಹಾರದ ಸಂಬಂಧ ಈ ಪ್ರಕರಣವನ್ನು ದಾಖಲಿಸಿರುವುದಿಲ್ಲ.

ಸದರಿ ಅಗ್ರೀಮೆಂಟ್ ಈ ಪ್ರಕರಣಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಯಾವ ಪ್ರಕರಣಕ್ಕಾಗಿ ಈ ಪ್ರಕರಣದಲ್ಲಿ ಅದನ್ನು ಹಿಂದಿರುಗಿಸಿರುತ್ತೀರಿ ಎಂದರೆ ಸಾಕ್ಷಿ ಆ ದಿನ ಅವರು ಕೇಳಿಕೊಂಡ ಕಾರಣ ನಾನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಯೋಗೇಶ್ ಮತ್ತು ಶೇಖರ್ ರವರಿಗೆ ಒಟ್ಟು ರೂ.4,75,000/- ಸಾಲವನ್ನು ಕೊಟ್ಟಿರುತ್ತೇನೆ. ಸದರಿ ಸಾಲಕ್ಕೆ ಎಷ್ಟು ಬಡ್ಡಿಯನ್ನು ಪಡೆದಿದ್ದೀರಿ ಎಂದರೆ ಸಾಕ್ಷಿಯು ಯಾವುದೇ ಬಡ್ಡಿಯನ್ನು ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಅಗ್ರೀಮೆಂಟ್ ನ್ನು ಖಾಲಿ ಹಾಳೆಯ ಮೇಲೆ ಬರೆಯಲಾಗಿತ್ತು. ಅದು ಸ್ಟ್ಯಾಂಪ್ ಪೇಪರ್ ಆಗಿರುವುದಿಲ್ಲ. ಸದರಿ ಅಗ್ರೀಮೆಂಟ್ 2015 ನೇ ಇಸವಿಯಲ್ಲಿ ಬರೆಯಲಾಗಿತ್ತು. ನಾನು ಆ ಕಾಲಕ್ಕೆ ಆರೋಪಿತನಿಂದ 3 ಚೆಕ್ಕು ಹಾಗೂ ಶೇಖರ್ ರವರಿಂದ 1 ಚೆಕ್ಕನ್ನು ಪಡೆದುಕೊಂಡಿರುತ್ತೇನೆ ಹಾಗೂ ಅವರ ಅಂಗಡಿಯ ಟೈಟಲ್ ಡೀಡ್ ನ್ನು ಪಡೆದುಕೊಂಡಿದ್ದೆ ಎಂದರೆ ಸರಿ. ಈ ಸಾಲವನ್ನು ಯೋಗೇಶ್ ರವರು ಶೇಖರ್ ರವರಿಗೆ ಕೊಡಿಸಿರುತ್ತಾರೆ ಎಂದರೆ ಸಾಕ್ಷಿಯು ಯೋಗೇಶ್ ರವರೇ ಸಾಲವನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತನು ನನ್ನಿಂದ ಯಾವುದೇ ಸಾಲವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತನಿಗೆ ರೂ.4,75,000/- ಸಾಲವನ್ನು ಕೊಟ್ಟಿರುವುದಿಲ್ಲ, ಕೇವಲ ರೂ.2,00,000/- ಸಾಲ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾಲವನ್ನು

ಎಸ್.ಎಸ್.ಶೇಖರ್ ರವರು ಪಡೆದಿದ್ದು ಅದಕ್ಕೆ ಆರೋಪಿತನು ಜಾಮೀನುದಾರರಾಗಿ ಇದ್ದರು ಎಂದರೆ ಸರಿಯಲ್ಲ.

ನಾನು ದಾಖಲಾತಿಗಳನ್ನು ಎಸ್.ಎಸ್.ಶೇಖರ್ ರವಗೆ ಹಿಂದಿರುಗಿಸುವ ಕಾಲಕ್ಕೆ ಎಸ್.ಎಸ್.ಶೇಖರ್ ರವರಿಂದ ಯಾವುದೇ ಹಣವನ್ನು ಪಡೆದು ಕೊಟ್ಟಿರುವುದಿಲ್ಲ. ಈ ಪ್ರಕರಣದಲ್ಲಿ ನಮೂದು ಮಾಡಿರುವ ಹಣವನ್ನು ಹೊರತುಪಡಿಸಿ ಬೇರೆ ಯಾವುದೇ ಹಣವನ್ನು ಆರೋಪಿತನಿಗೆ ಮತ್ತು ಎಸ್.ಎಸ್.ಶೇಖರ್ ರವರಿಗೆ ಕೊಟ್ಟಿರುವುದಿಲ್ಲ.

ಈ ಪ್ರಕರಣವು ದಾಖಲಾಗುವ ಪೂರ್ವದಲ್ಲಿ ನಾನು ಆರೋಪಿತನಿಗೆ ಒಂದು ನೋಟೀಸನ್ನು ನೀಡಿರುತ್ತೇನೆ. ಸದರಿ ನೋಟೀಸಿನಲ್ಲಿ ನನ್ನ ಬಳಿ ಆರೋಪಿತ ಮತ್ತು ಎಸ್.ಎಸ್.ಶೇಖರ್ ರವರು ನೀಡಿದ 4 ಚೆಕ್ಕು ಮತ್ತು ಒಂದು ಟೈಟಲ್ ಡೀಡ್ ಇದ್ದು ಅದರಲ್ಲಿನ ಒಂದು ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ ಎಂದು ನಮೂದು ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನೀವು ಆರೋಪಿತನಿಗೆ ಸಾಲವನ್ನು ಕೊಟ್ಟಿದ್ದರೆ ಎಸ್.ಎಸ್.ಶೇಖರ್ ರವರ ಹಕ್ಕುಪತ್ರವನ್ನು ಯಾವ ಕಾರಣಕ್ಕಾಗಿ ಪಡೆದಿದ್ದೀರಿ ಎಂದರೆ ಸಾಕ್ಷಿಯು ಅವರು ಜಾಮೀನುದಾರರಾಗಿ ಬಂದಿದ್ದರು. ನಿಮ್ಮ ಬಳಿ ಇರುವ ಉಳಿದ ಚೆಕ್ಕುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಎಸ್.ಎಸ್.ಶೇಖರ್ ರವರಿಂದ ಪುನಃ ಡೀಡ್ ನ್ನು ಪಡೆದು ಹಾಜರುಪಡಿಸಲು ಆಗುವುದಿಲ್ಲ. ಆರೋಪಿತನು ಉಳಿದ ರೂ.80,000/- ಹಣವನ್ನು ಕೊಟ್ಟರೆ ನಾನು ಚೆಕ್ಕುಗಳನ್ನು ಹಾಜರುಪಡಿಸುತ್ತೇನೆ. ಸದರಿ ಚೆಕ್ಕುಗಳು ನನ್ನ ಬಳಿ ಇರುವುದಿಲ್ಲ ಹಾಗೂ ಅವುಗಳನ್ನು ಬೇರೆ ಬೇರೆ ನ್ಯಾಯಾಲಯಗಳ ಮುಂದೆ ಪ್ರಕರಣಗಳನ್ನು ದಾಖಲು ಮಾಡಿದ್ದ ಕಾರಣ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಹಿಂಜರಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರವೀಣ ನನ್ನ ಅಕ್ಕನ ಮಗ. ನಾನು ಸದರಿ ಪ್ರವೀಣ್ ರವರ ಮುಖಾಂತರ ಎಸ್.ಎಸ್. ಸೋಮಶೇಖರ್ ರವರ ವಿರುದ್ಧ ತುರುವೇಕೆರೆ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ O.S.No.15/2019 ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ರಘು ನನ್ನ ಸ್ನೇಹಿತ. ರಘುರವರ ಮುಖಾಂತರ ಆರೋಪಿತನು ನೀಡಿದ 2 ಚೆಕ್ಕುಗಳಿಗೆ ಸಂಬಂಧಿಸಿದಂತೆ ಆರೋಪಿತನಿಗೆ ನೋಟೀಸನ್ನು ನೀಡಿರುತ್ತೇನೆ ಎಂದರೆ ಸರಿ, ಆದರೆ ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ. ಒಂದು ಚೆಕ್ಕು ರೂ.7,25,000/- ಮತ್ತೊಂದು ಚೆಕ್ಕು ರೂ.5,00,000/- ದಂತೆ ನೋಟೀಸನ್ನು ನೀಡಿರುತ್ತೇನೆ.

ನಾನು ಲೇವಾದೇವಿ ವ್ಯವಹಾರ ಮಾಡುತ್ತಿದ್ದು ಜನರಿಂದ ಹೆಚ್ಚಿ ನ ಬಡ್ಡಿಯನ್ನು ಪಡೆಯುವ ಉದ್ದೇಶದಿಂದ ಅವರಿಂದ ಹಲವಾರು ಚೆಕ್ಕುಗಳನ್ನು ಪಡೆದು ಬೇರೆ ಬೇರೆ ಪ್ರಕರಣವನ್ನು ದಾಖಲು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಎಸ್.ಎಸ್.ಶೇಖರ್ ರವರ ವಿರುದ್ಧ ಪ್ರಕರಣವನ್ನು ದಾಖಲಿಸಿ ಅವರಿಂದ ಹಣವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ರಘುರವರ ಮುಖಾಂತರ ನೋಟೀಸನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ನನ್ನಿಂದ ಸಾಲವನ್ನು ಪಡೆದಿರುವುದಿಲ್ಲ. ಆತನು ಕೇವಲ ಜಾಮೀನುದಾರನಾಗಿದ್ದನು ಎಂದರೆ ಸರಿಯಲ್ಲ. ಆರೋಪಿತನು ಕೇವಲ ಜಾಮೀನುದಾರನಾಗಿದ್ದ ಕಾರಣ ಅವರಿಂದ ಚೆಕ್ಕನ್ನು ಪಡದುಕೊಂಡು ಎಸ್.ಎಸ್. ಶೇಖರ್ ರವರು ಸಾಲವನ್ನು ಪಡೆದಿದ್ದ ಕಾರಣ ಅವರಿಂದ ಹಕ್ಕುಪತ್ರ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಇಂದಿಗೂ ನಾನು ನನ್ನ ದೂರು ನೋಟೀಸು ಮತ್ತು ಮುಖ್ಯ ವಿಚಾರಣೆಯನ್ನು ನಮೂದು ಮಾಡಿರುವಂತಹ ಮೊತ್ತದ ಸಾಲವನ್ನು ಪಡೆದಿರುವುದಿಲ್ಲ. ಆರೋಪಿತನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ನನಗೆ ಯಾವುದೇ ಹಣವನ್ನು ಕೊಡಲು ಬಾಧ್ಯಸ್ಥನಾಗಿರುತ್ತಾನೆ ಎಂದರೆ ಸರಿಯಲ್ಲ.

ಆರೋಪಿತನು ಎಸ್.ಎಸ್. ಶೇಖರ್ ರವರ ಪರವಾಗಿ ಈ ಪ್ರಕರಣದಲ್ಲಿ ನನಗೆ ಹಣವನ್ನು ನೀಡಿದ್ದು ನನ್ನ ಬಳಿ ಇರುವ ಎಸ್.ಎಸ್. ಶೇಖರ್ ರವರ ಡೀಡ್ ಆರೋಪಿತನಿಗೆ ಹಣವನ್ನು ವಸೂಲಿ ಮಾಡಲು ಅವಶ್ಯಕತೆ ಇರುತ್ತದೆ ಗೊತ್ತಿಲ್ಲ. ಇದೇ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು ಆರೋಪಿತನಿಂದ ಮತ್ತು ಎಸ್.ಎಸ್. ಶೇಖರ್ ರವರಿಂದ ಹಣವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ದೂರಿನಲ್ಲಿ ಆರೋಪಿತನಿಗೆ ಹಣವನ್ನು ದೂರಿನಲ್ಲಿ ನಮೂದು ಮಾಡಿದ ದಿನಾಂಕದಂದೇ ನೀಡಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಆರೋಪಿತನು ನಿ.ಪಿ-1 ಚೆಕ್ಕನ್ನು ನನಗೆ ರೂ.4,75,000/- ಹಣವನ್ನು ಪಡೆದುಕೊಳ್ಳುವಂತೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮತ್ತು ಎಸ್.ಎಸ್. ಶೇಖರ್ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಅವರ ಗಮನಕ್ಕೆ ಬಾರದೇ ಚೆಕ್ಕುಗಳನ್ನು ನಗದೀಕರಣಕ್ಕೆ ಸಲ್ಲಿಸಿ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ : ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಸಹಿ/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು**